# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1190
2. ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್
3. ಉತ್ತರಿಸುವ ದಿನಾಂಕ : 17/12/2025
4. ಉತ್ತರಿಸುವ ಸಚಿವರು : ಮಾನ್ಯ ಲೋಕೋಪಯೋಗಿ ಸಚಿವರು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಲೋಕೋಪಯೋಗಿಯಿಂದ ಭೂಮಿ/ ವಸತಿ ರಹಿತ ಕಟ್ಟಡಗಳ ಅಸಮರ್ಪಕ ಗುತ್ತಿಗೆ ನಿರ್ವಹಣೆಯಿಂದ 129.02 ಕೋಟಿ ಬಾಡಿಗೆ ಇದುವರೆಗೂ ವಸೂಲಿಯಾಗದಿರುವುದಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ; (ವಿವರ ನೀಡುವುದು)</td><td rowspan="2">1. ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿನ ಖಾಲಿ ಸರ್ಕಾರಿ ಜಾಗಗಳನ್ನು ಸಾರ್ವಜನಿಕ ಸೇವೆಯಲ್ಲಿರುವ ಸಂಘ ಸಂಸ್ಥೆಗಳು, ಕ್ರೀಡಾ ಪ್ರಾಧಿಕಾರಗಳು ಹಾಗೂ ಇನ್ನಿತರೆ ಸಾರ್ವಜನಿಕ ಮಹತ್ವದ ಸಂಸ್ಥೆಗಳಿಗೆ ಸದರಿ ಸಂಸ್ಥೆಗಳ ಕೋರಿಕೆಯ ಮೇರೆಗೆ ಸರ್ಕಾರದ ಅನುಮೋದನೆಯೊಂದಿಗೆ ಲೀಸ್ ಒಡಂಬಡಿಕೆ ಮಾಡಿಕೊಳ್ಳಲಾಗುತ್ತಿದೆ.<br>2. ಈ ರೀತಿ ಲೀಸ್ ಪಡೆದುಕೊಂಡ ಸಂಸ್ಥೆಗಳು ಲೀಸ್‌ಕರಾರಿನ ನಿಯಮಗಳನ್ನು ಉಲ್ಲಂಘಿಸಿದಂತಹ ಪ್ರಕರಣಗಳಲ್ಲಿ ಕರಾರು ಒಡಂಬಡಿಕೆ ಮಾಡಿಕೊಂಡಿರುವ ಲೋಕೋಪಯೋಗಿ ಇಲಾಖೆಯ ಅಧಿಕಾರಿಯು ಆಯಾ ಸಂಸ್ಥೆಗೆ ನೋಟೀಸ್‌ಗಳನ್ನು ಜಾರಿ ಮಾಡಿ ಕ್ರಮ ಕೈಗೊಳ್ಳಲಾಗುತ್ತಿರುತ್ತದೆ.<br>3. ಮಾನ್ಯ ಶಾಸಕರು ಪ್ರಸ್ತಾಪಿಸಿರುವ ಅಂಶವು ನೃಪತುಂಗ ರಸ್ತೆಯಲ್ಲಿರುವ ಕೃಷಿಕ ಸಮಾಜ ಕಟ್ಟಡಕ್ಕೆ ಸಂಬಂದಿಸಿದ್ದಾಗಿದ್ದು, ವಿವರಗಳು ಈ ಕೆಳಕಂಡಂತಿದೆ.<br>4. ಬೆಂಗಳೂರು ನೃಪತುಂಗ ರಸ್ತೆಯಲ್ಲಿರುವ ಕಟ್ಟಡದ 60258 ಚದರ ಅಡಿ (1ಎ - 15ಗು) ವಿಸ್ತೀರ್ಣದ ನಿವೇಶನವನ್ನು ಮೈಸೂರು ಪ್ರದೇಶ ಕೃಷಿಕ ಸಮಾಜ (ರೈತರ ಒಕ್ಕೂಟ, ಮೈಸೂರು)ರವರಿಗೆ ಸರ್ಕಾರದ ಆದೇಶ ಸಂಖ್ಯೆ:ಪಿಡಬ್ಲ್ಯೂಡಿ 93 ಬಿಓಕ್ಯೂ 64 ದಿನಾಂಕ:12.04.1966 ರನ್ವಯ 1966 ರಿಂದ 90 ವರ್ಷಗಳು ಅಂದರೆ 2065 ರವರೆಗೆ ಪ್ರತಿ ವರ್ಷಕ್ಕೆ ರೂ.1,000/- ರಂತೆ ಲೀಸ್ ಆಧಾರದ ಮೇಲೆ ನೀಡಲಾಗಿರುತ್ತದೆ.<br>5. ದಿನಾಂಕ:02.11.1987 ಪೂರಕ ಒಪ್ಪಂದದಂತೆ ಮೈಸೂರು ಪ್ರದೇಶ ಕೃಷಿಕ ಸಮಾಜ (ರೈತರ ಒಕ್ಕೂಟ, ಮೈಸೂರು) ರವರಿಗೆ ನೀಡಲಾಗಿದ್ದ 60258 ಚದರ ಅಡಿ ವಿಸ್ತೀರ್ಣದ ಪೈಕಿ 6930 ಚದರ ಅಡಿಯನ್ನು ರಸ್ತೆ ಅಗಲೀಕರಣಕ್ಕಾಗಿ ಬಿಟ್ಟಿರುವುದರಿಂದ ಉಳಿಕೆ 53328 ಚದರ ಅಡಿ (1ಎ-9ಗು) ವಿಸ್ತೀರ್ಣವನ್ನು ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು 99 ವರ್ಷಗಳಿಗೆ ಲೀಸ್ ಆಧಾರದ ಮೇಲೆ ನೀಡಲಾಗಿರುತ್ತದೆ.<br>6. ಕರ್ನಾಟಕ ಪ್ರದೇಶ ಕೃಷಿಕ ಸಮಾಜದವರು ನಿರ್ಮಿಸಿದ ಕಟ್ಟಡದಲ್ಲಿ ಉಪ ಬಾಡಿಗೆ ನೀಡಿರುವುದು ಹಾಗೂ ಕಟ್ಟಡ ನಿರ್ಮಾಣ ಮಾಡುವ ಮೊದಲು ಸರ್ಕಾರದ ವಾಸ್ತು ಶಿಲ್ಪಿಗಳಿಂದ ಅನುಮೋದನೆ ಪಡೆದ ನಂತರ ನಿರ್ಮಾಣ ಮಾಡಬೇಕಾಗಿರುತ್ತದೆ. ಆದರೆ, ನಿಯಮ ಬಾಹಿರವಾಗಿ ಕರ್ನಾಟಕ ಕೃಷಿಕ ಸಮಾಜದವರು ಕರ್ನಾಟಕ ಗೃಹ ಮಂಡಳಿ ವತಿಯಿಂದ 12 ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಂಡಿರುವುದು ಲೀಸ್ ಕರಾರಿನ ಷರತ್ತುಗಳ ಉಲ್ಲಂಘನೆಯಾಗಿರುತ್ತದೆ.<br>7. ಈ ಹಿನ್ನೆಲೆಯಲ್ಲಿ ಲೀಸ್ ಅವಧಿ ಊರ್ಜಿತವಿದ್ದರೂ ಸಹ, ಮೂಲ ಕರಾರನ್ನು ಉಲ್ಲಂಘಿಸಿರುವ ಅಂಶವನ್ನು ಉಲ್ಲೇಖಿಸಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ</td></tr>
<tr><td>ಆ)</td><td>ನೃಪತುಂಗ ರಸ್ತೆಯ 60,258 ಚ.ಅಡಿ ಶೈತ್ಯ ಉಗ್ರಾಣ ಸ್ಥಾವರ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗೆ ಗುತ್ತಿಗೆ ನೀಡಿದ್ದರೂ ಗುತ್ತಿಗೆದಾರರು ವಾಣಿಜ್ಯ ಉದ್ದೇಶಕ್ಕೆ ಸದರಿ ಜಾಗವನ್ನು ಬಳಸುವ ಮೂಲಕ ಗುತ್ತಿಗೆ ನಿಯಮಗಳ ಉಲ್ಲಂಘನೆ ಮಾಡಿದ್ದರೂ ಸದರಿ ಜಾಗವನ್ನು ಸರ್ಕಾರ ಹಿಂಪಡೆಯದಿರಲು ಕಾರಣವೇನು; ಈ ಅಕ್ರಮದಲ್ಲಿ ಭಾಗಿಯಾದ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ? (ವಿವರ ನೀಡುವುದು)</td></tr>
</table>

| | | |
|---|---|---|
| | | ಮಾರ್ಗಸೂಚಿದರದಂತೆ ದಿನಾಂಕ:20.01.1997 ರಿಂದ ದಿನಾಂಕ:28.02.2023 ರವರೆಗೆ ನೆಲ ಬಾಡಿಗೆ ದರವನ್ನು ರೂ.129.02 ಕೋಟಿಗಳ ಲೋಕೋಪಯೋಗಿ ಇಲಾಖೆಗೆ ಪಾವತಿಸಲು ತಿಳಿಸಿ ದಿನಾಂಕ: 07.11.2025, 21.12.2019, 06.06.2020, 11.08.2020, 29.03.2022 17.09.2022, ಹಾಗೂ 01.07.2023ರಲ್ಲಿ ಹಲವಾರು ಭಾರಿ ತಿಳುವಳಿಕೆ ಪತ್ರಗಳನ್ನು ಜಾರಿಗೊಳಿಸಲಾಗಿರುತ್ತದೆ ಹಾಗೂ ಸರ್ಕಾರದ ಪತ್ರ ಸಂಖ್ಯೆ:ಲೋಇ 56 ಬಿಎಂಎಸ್ 2020, ದಿನಾಂಕ:06.05.2024ರಲ್ಲಿ ಸದರಿ ಜಾಗವನ್ನು ತೆರವುಗೊಳಿಸಲು ಅಗತ್ಯ ಕ್ರಮವಹಿಸುವಂತೆ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು ಇವರಿಗೆ ತಿಳಿಸಲಾಗಿರುತ್ತದೆ.<br><br>8. ಸನ್ಮಾನ್ಯ ಕೃಷಿ ಸಚಿವರು, ಕರ್ನಾಟಕ ಸರ್ಕಾರರವರ ನಡವಳಿ ದಿನಾಂಕ:11.08.2023 ರಲ್ಲಿ ಕರ್ನಾಟಕ ಪ್ರದೇಶ ಕೃಷಿ ಸಮಾಜವು ರೈತರ ಏಕೈಕ ಹಾಗೂ ಅನುದಾನರಹಿತ ಸೇವಾ ಸಂಸ್ಥೆಯಾಗಿದ್ದು, ಸ್ವಂತ ಆದಾಯ ಮೂಲಗಳಿಂದ ಕ್ರೋಢೀಕರಿಸಿದ ಆರ್ಥಿಕ ಬಲದಿಂದ ಕೃಷಿ ವಿಚಾರ ಸಂಕಿರಣ, ಕ್ಷೇತ್ರೋತ್ಸವ, ಕೃಷಿ ಕಾರ್ಯಾಗಾರ, ಕೌಶಲ್ಯ ತರಬೇತಿ ಹಾಗೂ ಕೃಷಿ ಅಧ್ಯಯನ ಪ್ರವಾಸ ಮುಂತಾದ ಚಟುವಟಿಕೆಗಳನ್ನು ಎಲ್ಲಾ ತಾಲ್ಲೂಕು ಹಾಗೂ ಜಿಲ್ಲಾಮಟ್ಟದಲ್ಲಿ ಹಮ್ಮಿಕೊಳ್ಳುವ ಮೂಲಕ ರೈತರಿಗೆ ಸರ್ಕಾರದ ಯೋಜನೆಗಳನ್ನು ತಲುಪಿಸುತ್ತಾ ಸರ್ಕಾರ ಮತ್ತು ರೈತರ ನಡುವೆ ಸಂಪರ್ಕ ಸೇತುವೆಯಾಗಿ ಸೇವೆ ಸಲ್ಲಿಸುತ್ತಿದೆ ಹಾಗೂ ಕರ್ನಾಟಕ ಪ್ರದೇಶ ಕೃಷಿಕ ಸಮಾಜವು ರೈತರಿಗಾಗಿ ಸ್ಥಾಪನೆಗೊಂಡಿರುವ ಸರ್ಕಾರದ ಒಂದು ಅಧೀನ ಸಂಸ್ಥೆಯಾಗಿರುವುದರಿಂದ ಲೋಕೋಪಯೋಗಿ ಇಲಾಖೆಯ ಕೃಷಿ ಭವನಕ್ಕೆ ವಿಧಿಸಿರುವ ಭೂ-ಬಾಡಿಗೆ ರೂ.129.02 ಕೋಟಿಗಳನ್ನು ಮನ್ನಾ ಮಾಡುವಂತೆ ಹಾಗೂ ಸದರಿ ಜಾಗವನ್ನು ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಹೆಸರಿಗೆ ವರ್ಗಾಯಿಸಿ ಕೊಡುವಂತೆ ಕೋರಿರುತ್ತಾರೆ.<br>9. ಕೃಷಿಕ ಸಮಾಜದ ಪದಾಧಿಕಾರಿಗಳು ಮಾನ್ಯ ಕೃಷಿ ಸಚಿವರಿಗೆ ಹಾಗೂ ಮಾನ್ಯ ಲೋಕೋಪಯೋಗಿ ಸಚಿವರಿಗೆ ಮನವಿಗಳನ್ನು ಸಲ್ಲಿಸಿ ಸದರಿ ಮನವಿಗಳಲ್ಲಿ ಕೃಷಿಕ ಸಮಾಜದ ಧ್ಯೇಯೋದ್ದೇಶಗಳು ಮತ್ತು ಸೇವೆಗಳನ್ನು ವಿವರಿಸಿ ಸದರಿ ಸಂಸ್ಥೆಯು ರೈತಾಪಿ ವರ್ಗದ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುವ ಸಂಸ್ಥೆಯಾಗಿರುವುದರಿಂದ ಲೋಕೋಪಯೋಗಿ ಇಲಾಖೆಯು ವಿಧಿಸಿರುವ ನೆಲ ಬಾಡಿಗೆಯನ್ನು ಮನ್ನಾ ಮಾಡಿ ಸದರಿ ಜಾಗವನ್ನು ಕೃಷಿಕ ಸಮಾಜಕ್ಕೆ ನೀಡಬೇಕೆಂದು ಕೋರಿರುತ್ತಾರೆ.<br>10. ಸದರಿ ಪ್ರಸ್ತಾವನೆ ಪ್ರಸ್ತುತ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |

**ಸಂಖ್ಯೆ: ಲೋಇ 95 ಬಿಎಲ್ ಕ್ಯೂ 2025**

**(ಸತೀಶ ಜಾರಕಿಹೊಳಿ)**
ಲೋಕೋಪಯೋಗಿ ಸಚಿವರು.